ಮನೆ ಮುಂದೆ ಭಿಕ್ಷಕ್ಕೆ ಬಂದಿದ್ದವನೊಬ್ಬ ಏಕತಾರಿ ಮೀಟುತ್ತ ಮಂಟೇಸ್ವಾಮಿಯ ಕಾಲಜ್ಞಾನದ ಹಾಡು ಹಾಡುತ್ತ, ಮುಂದೆ ಕಲಿಯುಗದಲ್ಲಿ ಅರವತ್ತರ ಮುದುಕ ಹರೆಯದ ಹುಡುಗಿಯ ಕೇಳಬೇಕು ಎಂದು ಹಾಡುತ್ತಿದ್ದಾಗ ಒಳಗೆ ತೊಟ್ಟಿಲಲ್ಲಿ ಆಡುತ್ತಿದ್ದ ಮಗುವನ್ನ ಹೆಮ್ಮೆ ಸಮಾಧಾನದಿಂದ ನೋಡಿ ಖುಷಿ ಪಡುತ್ತಿದ್ದ ತಿಮ್ಮೇಟಯ್ಯ ಸಿಟ್ಟಿಗೆದ್ದು ಹೊರಗೆ ಬಂದು ಹಾಡುತ್ತಿದ್ದ ಭಿಕ್ಷುಕನಿಗೆ, ಚಪ್ಪಲೀಲಿ ಹೊಡೀತೀನಿ ಬೋಳಿಮಗನೆ ಹೋಗೋ ಇಲ್ಲಿಂದ ಎಂದು ರೇಗಾಡಿದ. ಇವನ ಆರ್ಭಟ ಕಂಡು ಭಿಕ್ಷಕ್ಕೆ ಬಂದವನು ಯಾಕ್ ಸ್ವಾಮಿ ಬಯ್ತೀರಿ ಭಿಕ್ಷೆ ಕೊಡಿ ಇಲ್ಲದಿದ್ರೆ ಮುಂದಹೋಗು ಅನ್ನಿ ಹೋಗ್ತೀನಿ, ಚಪ್ಪಲೀಲಿ ಹೊಡೆಯೋ ಮಾತು ಯಾಕೆ ಅಂತ ಗೊಣಗುತ್ತಿದ್ದಾಗ ತಿಮ್ಮೇಟಯ್ಯ ಬಾಗಿಲ ಹೊರಗೆ ಬಿಟ್ಟಿದ್ದ ಕೆರವನ್ನು ಕೈಗೇ ತೆಗೆದುಕೊಂಡಿದ್ದನ್ನ ನೋಡಿ ಭಿಕ್ಷದವನು ಮಾತುನಿಲ್ಲಿಸಿ ಬೇಗಬೇಗ ಅಲ್ಲಿಂದ ಓಡಿಯೇ ಹೋಗುವಂತೆ ಹೊರಟುಹೋದ. ಸುನಂದಾ ಒಳಗಿನಿಂದ ಭಿಕ್ಷದವನಿಗೆ ಕೊಡಲೆಂದು ಒಂದು ಮೊರದಲ್ಲಿ ಸ್ವಲ್ಪ ಹಸೀಟು ಸ್ವಲ್ಪ ಅಕ್ಕಿ ತಂದವಳು ಕೈಯಲ್ಲಿ ಕೆರ ಹಿಡಿದು ನಿಂತಿರುವ ಗಂಡನನ್ನು ಬೆದರಿ ಓಡುತ್ತಿರುವ ಭಿಕ್ಷದವನನ್ನು ನೋಡಿ ಗಂಡನಿಗೆ ಯಾಕಿಂಗೆ ಕೆರ ಹಿಡಕಂಡ್ ನಿಂತಿದ್ದೀರಿ ಆವಯ್ಯ ಯಾಕೆ ಭಿಕ್ಷ ಹಾಕಿಸ್ಕಳ್ಳದೆ ಹಂಗ ಹೋಯ್ತಾವನೆ ಅಂತ ಕೇಳಿದ್ಲು. ಇಂಥ ಕಳ್ಳನನ್ನಮಕ್ಕಳಿಗೆ ಕೆರ ತಗಂಡು ಹೋಡಿದೇ ಭಿಕ್ಷೆ ಹಾಕ್ತಾಳಂತೆ ನಡಿಯೇ ಒಳಕ್ಕೆ ಎಂದು ತಿಮ್ಮೇಟಯ್ಯ ಹೆಂಡತಿಗೆ ಗದರಿದ. ಗಂಡನ ಸಿಟ್ಟಿಗೆ ಕಾರಣವಾಗುವಂತದ್ದು ಏನುಮಾಡ್ದ ಆ ಭಿಕ್ಷದವನು ಅಂತ ಅರ್ಥವಾಗದೆ ಸುನಂದಾ ಮೊರದಲ್ಲಿ ತಂದಿದ್ದ ಹಸೀಟು ಅಕ್ಕಿ ತಗಂಡು ಒಳಗೆಹೋದಳು. ತಿಮ್ಮೇಟಯ್ಯ ಕೈಲಿದ್ದ ಕೆರವನ್ನು ಕೆಳಗೆಹಾಕಿ ಒಳಗೋಗಿ ಕೈತೊಳಕೊಂಡು ತೊಟ್ಟಿಲಲ್ಲಿ ಇದ್ದ ಮಗುವನ್ನ ಎತ್ತಿಕೊಳ್ಳುತ್ತಲೇ ತಿಮ್ಮೇಟಯ್ಯನಿಗೆ ಆ ಭಿಕ್ಷದವನಿಂದ ಉಂಟಾದ ಬೇಸರವೆಲ್ಲ ಕರಗಿ ಮಗುವಿನ ಮೃದುಸ್ಪರ್ಶದಿಂದ ಮೈಮನಸೆಲ್ಲ ಬೆಚ್ಚಗಾಗಿ ಹಿತಭಾವನೆಯಿಂದ ಮನಸ್ಸು ನಿರಾಳವಾಯ್ತು.

ಶಾರದಮ್ಮ ಅಳಿಯನಿಗೆ ಈ ಕೇಸುಗೀಸು ಏನೂ ಬ್ಯಾಡ, ಅವರು ಏನಾದ್ರೂ ಮಾಡಿಕೊಳ್ಳಲಿ ಸುಮ್ಮನಿದ್ದುಬಿಡಿ, ಅವರು ನಿಮಗೂ ಕೊಟ್ಟವರಲ್ಲ ಅಂದಾಗ, ಮಗಳು ಶೋಭಾ ಸಿಟ್ಟಿನಿಂದ ಏನಮ್ಮ ಕೊಟ್ಟಿರೋದು ಆಗಲೋ ಈಗಲೋ ಬಿದ್ದುಹೋಗೋ ಈ ಮನೆ, ಎರಡೆಕರೆ ತ್ವಾಟ, ಎರಡೆಕರೆ ಗದ್ದೆ ಅಷ್ಟು ಸಾಕ, ಇನ್ನೂ ಇಪ್ಪತ್ತೆಕರೆ ಗದ್ದೆ, ನಾಲ್ಕೆಕರೆ ತ್ವಾಟ ಆ ಮುಂಡೆ ಪಾಲಾಗಬೇಕೇನಮ್ಮ, ಏನು ಹಕ್ಕಯಿತೇ ಆ ಮುಂಡೆಗೆ? ಅಪ್ಪಿಗ್ ಇಲ್ಲದಿದ್ರು ಅವಳ ಹೊಟ್ಟೇಲಿ ಹುಟ್ಟದಲ್ಲವ್ವ ಆ ಗಂಡ ಮಗೀಗೆ ಇದ್ದದಲ್ಲ ಅಂತ ಶಾರದಮ್ಮ ಮಗಳಿಗೆ ಸಮಜಾಯಿಷಿ ಕೊಟ್ಟಾಗ ಶೋಭಾ ನಖಶಿಖಾಂತ ಉರಿದುಬಿದ್ದು, ಯಾರಿಗುಟ್ಟಿದ್ದೋ ಅದು. ಅಪ್ಪನಿಗೇ ಹುಟ್ಟದೆ ಅನ್ನಾದಿಕ್ಕೆ ಏನು ಗ್ಯಾರಂಟಿ, ಅಲ್ಲಕಣಮ್ಮ ಅಪ್ಪನಿಗೆ ಈಗ ವಯಸ್ಸು ಎಷ್ಟಾಯ್ತು ಅರವತ್ತೈದು ವರ್ಸ. ಈ ವಯಸ್ನಲ್ಲಿ ಅಪ್ಪನಿಗೆ ಮಕ್ಳು ಹುಟ್ಟಿಸೋ ತಾಕತ್ತು ಇದ್ದದ ನೀನೇ ಹೇಳು. ಅಂದಾಗ ಮಗಳು ಅಳಿಯನ ಮುಂದೆಯೇ ಈ ಮಾತು ಅಂದದ್ದಕ್ಕೆ ಶಾರದಮ್ಮ ಬೇಸರ ಮಾಡಿಕೊಂಡು ಏನೋ ನನಗೊತ್ತಿಲ್ಲವ್ವ ನಿಮಗ್ ಕಂಡಂಗ ಮಾಡಿ, ಅಂತೇಳಿ ಅಲ್ಲಿಂದ ಎದ್ದು ಒಳಗೆ ಹೋದರು. ಪ್ರಕಾಶ ಹೆಂಡತಿಗೆ ನಿಮ್ಮಮ್ಮನ ತಾವ ಹೇಳಿ ಏನು ಪ್ರಯೋಜನ ಕೇಸು ಹಾಕೇ ಬಿಡುವ. ಅದೆಷ್ಟೇ ಖರ್ಚಾಗಲಿ ಬಿಡಕ್ಕಾಗದು ಹೊಟ್ಟೇಲಿ ಹುಟ್ಟಿದ ಮಗಳು ನೀನಿದ್ದೀಯ ನಿನ್ನ ಹೊಟ್ಟೇಲಿ ಹುಟ್ಟಿದ ಮೊಮ್ಮಗ ನಮ್ಮ ಶಿವೂ ಇರುವಾಗ ಯಾವೊಳೋ ಹಾದರಗಿತ್ತೀನ ಮಡಿಕ್ಕಂಡು ಅವಳ ಹೊಟ್ಟೇಲಿ